# ಕರ್ನಾಟಕ ಸರ್ಕಾರ
# ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ಸಂಖ್ಯೆ:ಸಿ7(2)ಯೋಜನೆ/ಡಯಟ್.ಸ್ಥಳಾಂತರ/04/2024-25/84 ದಿನಾಂಕ: 23-04-2025

## ಸುತ್ತೋಲೆ

**ವಿಷಯ**: ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಸೃಜನೆ ಮಾಡುವ ಪ್ರಕ್ರಿಯೆ ಕುರಿತು.

**ಉಲ್ಲೇಖ:** ಈ ಕಛೇರಿಯ ಆದೇಶ ಸಂಖ್ಯೆ: ಸಿ7(2)ಯೋಜನೆ/ಡಯಟ್.ಸ್ಥಳಾಂತರ/04/2024-25 ದಿನಾಂಕ: 15.04.2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಲಬುರಗಿ ವಿಭಾಗದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಹಲವಾರು ಕಂದಾಯ ತಾಲೂಕುಗಳನ್ನು ಸರ್ಕಾರವು ಸೃಜನೆ ಮಾಡಿ ಆದೇಶಿಸಿರುತ್ತದೆ. ಸದರಿ ಕಂದಾಯ ತಾಲೂಕುಗಳಲ್ಲಿ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಕಚೇರಿಗಳನ್ನು ಸೃಜನೆ ಮಾಡುವ ಪ್ರಕ್ರಿಯೆಯು ಬಾಕಿ ಇರುತ್ತದೆ. ಅದರಂತೆ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ, ನೂತನವಾಗಿ ಸೃಜನೆಯಾಗಿರುವ ಕಂದಾಯ ತಾಲೂಕುಗಳಲ್ಲಿ ತಾಲೂಕು ಮಟ್ಟದ ಕ್ಷೇತ್ರ ಶಿಕ್ಷಣಾಧಿಕಾರಿಯ ಕಛೇರಿಯನ್ನು ಸೃಜಿಸುವ ಪ್ರಕ್ರಿಯೆ ಕುರಿತಾಗಿ ಈ ಸುತ್ತೋಲೆಯ ಮಾನದಂಡಗಳಂತೆ ಕ್ರಮವಹಿಸಬೇಕಿದೆ.

ಉಲ್ಲೇಖಿತ ಆದೇಶದನ್ವಯ ಕಲಬುರಗಿ ಜಿಲ್ಲೆಯ ಕಮಲಾಪುರ ಕಂದಾಯ ತಾಲೂಕಿಗೆ ಸಂಬಂಧಿಸಿದಂತೆ, ಒಂದು ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕಮಲಾಪುರ ಈ ಕಛೇರಿಯನ್ನು ಸೃಜಿಸಿ ಆದೇಶಿಸಲಾಗಿದೆ. ಸದರಿ ಕಛೇರಿಯನ್ನು ಕಮಲಾಪುರ ತಾಲೂಕಿನಲ್ಲಿ ಈಗಾಗಲೇ ಇರುವ ಡಯಟ್ ಕಟ್ಟಡದಲ್ಲಿ ಪ್ರಾರಂಭಿಸಲು ಆದೇಶಿಸಲಾಗಿದೆ. ಆದರೆ ಈ ನೂತನ ಕಚೇರಿಗೆ ಅವಶ್ಯವಿರುವ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳ ಕುರಿತಾಗಿ ನಿರ್ದೇಶನವನ್ನು ನೀಡಿರುವುದಿಲ್ಲ. ಕೇವಲ ಕಮಲಾಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಸೀಮಿತವಾಗಿರದೇ, ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ನೂತನವಾಗಿ ರಚಿಸಲಾಗಿರುವ ಕಂದಾಯ ತಾಲೂಕುಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯನ್ನು ಸೃಜಿಸಲು ಈ ಕೆಳಕಂಡ ಕ್ರಮಗಳನ್ನು ಪಾಲಿಸಿಕೊಂಡು ನಿಯಮಾನುಸಾರ ಕ್ರಮ ವಹಿಸಬೇಕಾಗಿದೆ.

- **ಹಂತ 1:** ನೂತನ ಕಂದಾಯ ತಾಲೂಕಿನ ವ್ಯಾಪ್ತಿಗೆ ಒಳಪಡುವಂತಹ ಕ್ಲಸ್ಟರ್‌ಗಳು ಹಾಗೂ ಆಯಾ ಕ್ಲಸ್ಟರ್‌ನಲ್ಲಿನ ಶಾಲೆಗಳ ಪಟ್ಟಿಯನ್ನು ನೂತನ ಶೈಕ್ಷಣಿಕ ವಲಯ / ಬ್ಲಾಕ್ನ ಹೆಸರಿನಡಿಯಲ್ಲಿ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ರವರು ದಿನಾಂಕ: 29.04.2025ರ ಒಳಗಾಗಿ ಅಧಿಸೂಚನೆ ಹೊರಡಿಸುವುದು.
- **ಹಂತ 2:** ಈ ಸುತ್ತೋಲೆಯಲ್ಲಿ ನೀಡಿರುವ ಅನುಬಂಧದಂತೆ, ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯನ್ನು ಸೃಜಿಸಲು ಬೇಕಾಗುವ ಅವಶ್ಯಕ ಹುದ್ದೆಗಳ ಮಾಹಿತಿಯನ್ನು ಅವಲೋಕಿಸುವುದು ಹಾಗೂ ಸದರಿ ಹುದ್ದೆಗಳಿಗೆ ಸ್ಥಳಾಂತರದ ಮೂಲಕ ತುಂಬಬೇಕಾದ ಹುದ್ದೆಗಳನ್ನು ಗುರುತಿಸಿಕೊಳ್ಳುವುದು. (ಯಾವುದೇ ಹೊಸ ಹುದ್ದೆಗಳನ್ನು ಸೃಜನೆ ಮಾಡಲು ಅವಕಾಶವಿರದೇ ಕೇವಲ ಸ್ಥಳಾಂತರಕ್ಕೆ ಮಾತ್ರ ಅವಕಾಶವಿರುತ್ತದೆ.)
- **ಹಂತ 3:** ಆಯಾ ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ) ಕಛೇರಿ ಮತ್ತು ಉಪ ನಿರ್ದೇಶಕರು (ಅಭಿವೃದ್ಧಿ)-ಡಯಟ್ ಕಛೇರಿ, ಆಯಾ ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆಗಳ ಸಂಪೂರ್ಣ ಮಾಹಿತಿಯನ್ನು ತಯಾರಿಸಿಟ್ಟುಕೊಳ್ಳುವುದು.

- **ಹಂತ 4:** ವಿವಿಧ ಕಛೇರಿಗಳಲ್ಲಿ ಪ್ರಸ್ತುತ ಮಂಜೂರಾದ ಹುದ್ದೆಗಳನ್ನಷ್ಟೇ ಸ್ಥಳಾಂತರಗೊಳಿಸುವ ಅವಕಾಶ ಇರುವುದರಿಂದ, ಈ ಹುದ್ದೆಗಳನ್ನು ಸ್ಥಳಾಂತರಗೊಳಿಸುವ ಪ್ರಕ್ರಿಯೆಯನ್ನು ಈ ಕೆಳಕಂಡ ಸದಸ್ಯರನ್ನೊಳಗೊಂಡಂತಹ ಸಮಿತಿಯು ಸಭೆ ಸೇರಿ ನಿರ್ಧರಿಸಬೇಕಾಗಿದೆ. ಸದರಿ ಸಮಿತಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸೂಚನೆಯಂತೆ ಸಭೆ ದಿನಾಂಕವನ್ನು ನಿಗದಿಪಡಿಸಿ, ಉಪ ನಿರ್ದೇಶಕರು (ಆಡಳಿತ), ರವರು ಸಭೆಗೆ ಎಲ್ಲಾ ಸದಸ್ಯರನ್ನು ಅಗತ್ಯ ಮಾಹಿತಿಯೊಂದಿಗೆ ಹಾಜರಿರಲು ಸೂಚಿಸುವುದು.

**ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಸೃಜನೆ ಸಮಿತಿ**

| ಕ್ರ.ಸಂ | ಅಧಿಕಾರಿಗಳು | ಪದನಾಮ |
|---|---|---|
| 1 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ | ಅಧ್ಯಕ್ಷರು |
| 2 | ಉಪ ನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ, | ಸದಸ್ಯಕಾರ್ಯದರ್ಶಿ |
| 3 | ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ | ಸದಸ್ಯರು |
| 4 | ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು | ಸದಸ್ಯರು |
| 5 | ಶಿಕ್ಷಣಾಧಿಕಾರಿಗಳು, ಮಧ್ಯಾಹ್ನಉಪಹಾರ ಯೋಜನೆ ಜಿಲ್ಲಾ ಪಂಚಾಯತಿ | ಸದಸ್ಯರು |
| 6 | ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಪಂಚಾಯತಿ | ಸದಸ್ಯರು |

- **ಹಂತ 5:** ಈ ಸುತ್ತೋಲೆಯನ್ನು ಅನುಸರಿಸುತ್ತಾ ಸಮಿತಿಯ ಸಭೆಯನ್ನು ಕರೆದು ಪ್ರಕ್ರಿಯೆಯ ಕುರಿತು ಚರ್ಚಿಸಿ ಹುದ್ದೆಗಳ ಸ್ಥಳಾಂತರದ ಕುರಿತಾಗಿ ನಿರ್ಣಯವನ್ನು ಕೈಗೊಂಡು **ದಿನಾಂಕ: 03.05.2025ರ ಒಳಗಾಗಿ** ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಬೇಕಾಗುತ್ತದೆ.

ನೂತನವಾಗಿ ಸೃಜನೆಯಾಗುವ ಪ್ರತಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಈ ಕೆಳಕಂಡಂತೆ ಅಧಿಕಾರಿ/ ಸಿಬ್ಬಂದಿಯವರ ಹುದ್ದೆಗಳನ್ನು ಸ್ಥಳಾಂತರಗೊಳಿಸಬೇಕಾಗುತ್ತದೆ.

**ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಹುದ್ದೆಗಳ ಮಾಹಿತಿ**

| ಕ್ರ. ಸಂ | ಪದನಾಮ | ಹುದ್ದೆಗಳ ಸಂಖ್ಯೆ | ವೃಂದ | ವೇತನ ಶ್ರೇಣಿ | ಸ್ಥಳಾಂತರಿಸಲಾಗುವ ಹುದ್ದೆ | ಸದರಿ ಹುದ್ದೆಯ ಮೂಲಸ್ಥಾನ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಕ್ಷೇತ್ರ ಶಿಕ್ಷಣಾಧಿಕಾರಿಗಳು | 1 | ಎ | 83700 - 155200 | | |
| 2 | ಕ್ಷೇತ್ರ ಸಮನ್ವಯ ಅಧಿಕಾರಿಗಳು | 1 | ಬಿ | 69250 - 134200 | | |
| 3 | ಸಹಾಯಕ ನಿರ್ದೇಶಕರು (ಎಂ.ಡಿ.ಎಂ) | 1 | ಬಿ | 54175 - 99400 | | |
| 4 | ಅಧೀಕ್ಷಕರು | 1 | ಸಿ | 61300 - 112900 | | |
| 5 | ಪ್ರಥಮ ದರ್ಜೆ ಸಹಾಯಕರು | 2 | ಸಿ | 44425 - 83700 | | |
| 6 | ದ್ವಿತೀಯ ದರ್ಜೆ ಸಹಾಯಕರು/ಸಿ.ಸಿ.ಟಿ | 2 | ಸಿ | 34100 - 67600 | | |
| 7 | ಸೇವಕ | 2 | ಡಿ | 27000 - 46675 | | |
| **ಒಟ್ಟು ಹುದ್ದೆಗಳು** | | **10** | - | - | | |

- **ಹಂತ 6:** ಸದರಿ ಹುದ್ದೆಗಳಿಗೆ, ನಿಮ್ಮ ಜಿಲ್ಲೆಯಲ್ಲಿರುವ ಉಪ ನಿರ್ದೇಶಕರು (ಅಭಿವೃದ್ಧಿ) ಕಛೇರಿ, ಡಯಟ್ ಕಛೇರಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಅಥವಾ ವಯಸ್ಕರ ಶಿಕ್ಷಣಾಧಿಕಾರಿಗಳ ಕಛೇರಿಗಳಿಂದ ಅಥವಾ ಮುಚ್ಚಿಹೋಗಿರವಂತಹ ಪ್ರಾಥಮಿಕ/ ಪ್ರೌಢ ಶಾಲೆಗಳಿಂದ ಹುದ್ದೆಗಳನ್ನು ಸ್ಥಳಾಂತರಗೊಳಿಸಬಹುದಾಗಿರುತ್ತದೆ. ಒಂದು ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಸೃಜನೆಗೆ ಮೇಲ್ಕಂಡಂತೆ 10 ಅಧಿಕಾರಿ/ ಸಿಬ್ಬಂದಿಗಳ ಅಗತ್ಯತೆ ಇರುತ್ತದೆ.
- **ಹಂತ 7:** ಸ್ಥಳಾಂತರಗೊಳಿಸಬೇಕಾದ ಹುದ್ದೆಗಳನ್ನು ಗುರುತಿಸಿಕೊಂಡ ನಂತರ ತಾತ್ಕಾಲಿಕವಾಗಿ ಅಥವಾ ಖಾಯಂ ಆಗಿ ಯಾವ ಕಟ್ಟಡದಲ್ಲಿ ಸದರಿ ಕಛೇರಿಯನ್ನು ಪ್ರಾರಂಭಿಸಬಹುದು ? ಎನ್ನುವ ಮಾಹಿತಿಯನ್ನು ಸಹ ಸದರಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಸೃಜನೆ ಸಮಿತಿಯಲ್ಲಿ ನಿರ್ಣಯಿಸಿ ಪ್ರಸ್ತಾವನೆಯಲ್ಲಿ ಸೇರಿಸುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕಮಲಾಪೂರ ಈ ನೂತನ ಕಛೇರಿ ಸೃಜನೆಗೆ ಸಂಬಂಧಿಸಿದಂತೆ, ನಮ್ಮ ಕಛೇರಿ ಹಂತದಲ್ಲಿ ಕೈಗೊಂಡ ಪ್ರಕ್ರಿಯೆ ಕುರಿತಾದ ನಡಾವಳಿಗಳನ್ನು ನಿಮ್ಮ ಅನುಕೂಲಕ್ಕಾಗಿ ಹಾಗೂ ಉಲ್ಲೇಖಕ್ಕಾಗಿ ಈ ಮೂಲಕ ಲಗತ್ತಿಸಲಾಗಿದೆ. ಸದರಿ ನಡಾವಳಿಯಂತೆಯೇ ನಿಮ್ಮ ಜಿಲ್ಲೆಗಳಲ್ಲಿಯೂ ಕ್ರಮವಹಿಸಲು ಈ ಮೂಲಕ ಆದೇಶಿಸಲಾಗಿದೆ.

**ಟಿಪ್ಪಣಿ :**

1. ವಾಹನ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರನ್ನು ಕೆ.ಕೆ.ಆರ್.ಡಿ.ಬಿ ಅನುದಾನದಲ್ಲಿ ಪಡೆಯಲು ಆಯಾ ಶಾಸಕರಿಗೆ ಮನವಿ ಸಲ್ಲಿಸುವುದು. ಅಲ್ಲದೇ, ಪ್ರಸುತ್ತ ಜಾರಿಯಲ್ಲಿರುವ ವೇತನ ಶ್ರೇಣಿಯ ಪ್ರಕಾರ ವಾಹನ ಚಾಲಕರಿಗೆ ಮೂರು ವರ್ಷದ ವೇತನ ಪಾವತಿಸಲು (ವಾರ್ಷಿಕ ರೂ. 2.50 ಲಕ್ಷ X 3) ಹಾಗೂ ಒಂದು ಮಹೇಂದ್ರ ಬೊಲೇರೂ ವಾಹನವನ್ನು ಖರೀದಿ ಮಾಡಲು (ಪ್ರಸುತ್ತ ದರದಂತೆ ಅಂದಾಜು ರೂ. 12.50 ಲಕ್ಷ) ಬೇಕಾಗುವ ಅನುದಾನವನ್ನು ಒಳಗೊಂಡು ಒಟ್ಟು ರೂ. 20.00 ಲಕ್ಷಗಳನ್ನು ಆಯಾ ಶಾಸಕರು 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಅನುದಾನದಲ್ಲಿ ನಿಗದಿಪಡಿಸಲು ದಿನಾಂಕ: 10.05.2025ರ ಒಳಗಾಗಿ ಸಂಬಂಧಿಸಿದ ಉಪ ನಿರ್ದೇಶಕರು (ಆಡಳಿತ) ರವರು ಪ್ರಸ್ತಾವನೆಯನ್ನು ಸಲ್ಲಿಸುವುದು.
2. ನೂತನ ಕಛೇರಿಗೆ ಕಟ್ಟಡ / ಮೂಲ ಭೂತ ಸೌಕರ್ಯಗಳನ್ನು ಒಳಗೊಂಡು ಇನ್ನಿತರೆ ಅವಶ್ಯಕ ಸೌಲಭ್ಯಗಳಿಗಾಗಿ ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ಆಯಾ ಅಭಿಯಂತರರುಗಳಿಂದ ಅಂದಾಜು ಪಟ್ಟಿ ಪಡೆದು ಕೆ.ಕೆ.ಆರ್.ಡಿ.ಬಿ ಅನುದಾನದಲ್ಲಿ ಭರಿಸಿಕೊಂಡು ಸೌಕರ್ಯಗಳನ್ನು ಒದಗಿಸಿಕೊಳ್ಳುವುದು. ಈ ಕುರಿತು ದಿನಾಂಕ: 10.05.2025ರ ಒಳಗಾಗಿ ಆಯಾ ಶಾಸಕರಿಗೆ ಸಂಬಂಧಿಸಿದ ಉಪ ನಿರ್ದೇಶಕರು (ಆಡಳಿತ) ರವರು ಕೆ.ಕೆ.ಆರ್.ಡಿ.ಬಿ ಅನುದಾನವನ್ನು ನಿಗದಿಪಡಿಸಲು ಪ್ರಸ್ತಾವನೆ ಸಲ್ಲಿಸುವುದು.
3. ನಿಮ್ಮ ಹಂತದಲ್ಲಿ ಕಳುಹಿಸಿದ ಪ್ರಸ್ತಾವನೆಯನ್ನು ಈ ಕಛೇರಿ ಹಂತದಲ್ಲಿ ಪರಿಶೀಲಿಸಿ, **ಸರ್ಕಾರದ ಅನುಮೋದನೆ ಪಡೆದು** ಈ ಕಛೇರಿಯಿಂದ ಹೊರಡಿಸಿದ ಆದೇಶದ ದಿನಾಂಕದಿಂದ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳು ಅಸ್ತಿತ್ವಕ್ಕೆ ಬರಲಿವೆ.

23.04.25

**(ಡಾ. ಆಕಾಶ್ ಎಸ್. ಭಾ.ಆ.ಸೇ)**
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

**ಪ್ರತಿಗಳನ್ನು ಮಾಹಿತಿಗಾಗಿ ಸಲ್ಲಿಸಿದೆ:**

1) ಸರಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹು ಮಹಡಿ ಕಟ್ಟಡ, ಬೆಂಗಳೂರು-01.

ರವಾನಿಸಿದೆ
ದಿನಾಂಕ 24/4/25

2) ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01.
3) ಮಾನ್ಯ ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಕಲಬುರಗಿ.
4) ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಕಲಬುರಗಿ, ಬೀದರ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ .

**ಸೂಕ್ತ ಕ್ರಮಕ್ಕಾಗಿ:**

1) ಪ್ರಾಂಶುಪಾಲರು, ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಸಿಟಿಇ) ಕಲಬುರಗಿ.
2) ವಿಭಾಗದ ಎಲ್ಲಾ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ,
3) ವಿಭಾಗದ ಎಲ್ಲಾ ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತುತರಬೇತಿ ಸಂಸ್ಥೆ (ಡಯಟ್)
4) ವಿಭಾಗದ ಎಲ್ಲಾ ಜಿಲ್ಲೆಗಳ ಶಿಕ್ಷಣಾಧಿಕಾರಿಗಳು, ಮ.ಉ.ಯೋಜನೆ ಜಿಲ್ಲಾ ಪಂಚಾಯತ್
5) ವಿಭಾಗದ ಎಲ್ಲಾ ಜಿಲ್ಲೆಗಳ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಪಂಚಾಯತ್
6) ವಿಭಾಗದ ಎಲ್ಲಾ ಸಂಬಂಧಿಸಿದ ತಾಲೂಕುಗಳ ನೂತನ ಮತ್ತು ಹಳೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು.
7) ಕಛೇರಿ ಕಡತಕ್ಕೆ.

**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ**

ಸಂಖ್ಯೆ: ಸಿ7(2)ಯೋಜನೆ/ಡಯಟ್.ಸ್ಥಳಾಂತರ/04/2024-25 / 85 ದಿನಾಂಕ: 22/04/2025

**ಸಭಾ ನಡಾವಳಿ**

ದಿನಾಂಕ: 19.04.2025 ಹಾಗೂ ದಿನಾಂಕ: 22.04.2025 ರಂದು ಮಾನ್ಯ ಅಪರ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :**

1. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
2. ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ.
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು.
4. ಪ್ರಾಚಾರ್ಯರು, ಸಿಟಿಇ, ಕಲಬುರಗಿ.
5. ಸಹ ನಿರ್ದೇಶಕರು(ಆಡಳಿತ), ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ.
6. ಉಪ ನಿರ್ದೇಶಕರು(ಯೋಜನೆ), ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ.
7. ಪ್ರಾಚಾರ್ಯರು, ಡಯಟ್ ಕಲಬುರಗಿ.
8. ಹಿರಿಯ ಸಹಾಯಕ ನಿರ್ದೇಶಕರು, ಯೋಜನೆ/ಪ್ರಾಥಮಿಕ/ಆಡಳಿತ-2, ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ.
9. ವಿಭಾಗದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ.
10. ವಿಭಾಗದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಅಭಿವೃದ್ಧಿ), ಶಾಲಾ ಶಿಕ್ಷಣ ಇಲಾಖೆ.
11. ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ.

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:**

ಮಾನ್ಯ ಅಪರ ಆಯುಕ್ತರು ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳೊಂದಿಗೆ ಕಲಬುರಗಿ ವಿಭಾಗದಲ್ಲಿ ನೂತನವಾಗಿ ರಚಿಸಲಾದ ಕಂದಾಯ ತಾಲೂಕುಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯನ್ನು ಸೃಜನೆ ಮಾಡುವ ಕುರಿತಾಗಿ ಸದರಿ ಸಭೆಯಲ್ಲಿ ಚರ್ಚಿಸಲಾಯಿತು. ದಿನಾಂಕ: 15.04.2025 ರಂದು ಈಗಾಗಲೇ ಕಮಲಾಪೂರ ತಾಲೂಕಿಗೆ ಸಂಬಂಧಿಸಿದಂತೆ ಒಂದು ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಮಲಾಪೂರವನ್ನು ಸೃಜಿಸಿ ಆದೇಶಿಸಲಾಗಿದೆ. ಸದರಿ ನೂತನ ಕಛೇರಿಗೆ ಅವಶ್ಯಕವಿರುವ ಅಧಿಕಾರಿ/ ಸಿಬ್ಬಂದಿ ವರ್ಗದವರನ್ನು ಒದಗಿಸುವ ಕುರಿತು ಸಭೆಯಲ್ಲಿ ಪಾಲ್ಗೊಂಡಿದ್ದಂತಹ ಎಲ್ಲಾ ಅಧಿಕಾರಿಗಳೊಂದಿಗೆ ಚರ್ಚಿಸಿ ಹುದ್ದೆ ಸ್ಥಳಾಂತರದ ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯು ಉತ್ತಮವಾಗಿ ಕಾರ್ಯನಿರ್ವಹಿಸಲು ಕೆಳಕಂಡ ಕೋಷ್ಟಕದಂತೆ ಅಧಿಕಾರಿ/ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ ಎಂದು ನಿರ್ಧರಿಸಲಾಯಿತು.

## ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹುದ್ದೆಗಳ ಮಾಹಿತಿ

| ಕ್ರ.ಸಂ. | ಪದನಾಮ | ಹುದ್ದೆಗಳ ಸಂಖ್ಯೆ | ವೃಂದ | ವೇತನ ಶ್ರೇಣಿ | ಸ್ಥಳಾಂತರಿಸಲಾಗುವ ಹುದ್ದೆ | ಸದರಿ ಹುದ್ದೆಯ ಮೂಲಸ್ಥಾನ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಕ್ಷೇತ್ರ ಶಿಕ್ಷಣಾಧಿಕಾರಿಗಳು | 1 | ಎ | 83700 - 155200 | | |
| 2 | ಕ್ಷೇತ್ರ ಸಮನ್ವಯ ಅಧಿಕಾರಿಗಳು | 1 | ಬಿ | 69250 – 134200 | | |
| 3 | ಸಹಾಯಕ ನಿರ್ದೇಶಕರು | 1 | ಬಿ | 54175 – 99400 | | |
| 4 | ಪತ್ರಾಂಕಿತ ವ್ಯವಸ್ಥಾಪಕರು | 0 | ಬಿ | 65950 – 124900 | | |
| 5 | ಅಧೀಕ್ಷಕರು | 1 | ಸಿ | 61300 – 112900 | | |
| 6 | ಪ್ರಥಮ ದರ್ಜೆ ಸಹಾಯಕರು | 2 | ಸಿ | 44425 – 83700 | | |
| | | | | | | |
| 7 | ದ್ವಿತೀಯ ದರ್ಜೆ ಸಹಾಯಕರು/ಸಿ.ಸಿ.ಟಿ | 2 | ಸಿ | 34100 – 67600 | | |
| | | | | | | |
| 8 | ಸಿಸಿಟಿ | 0 | ಸಿ | 34100 – 67600 | | |
| 9 | ಸೇವಕ | 2 | ಡಿ | 27000 – 46675 | | |
| | | | | | | |
| 10 | ವಾಹನ ಚಾಲಕ | 0 | ಡಿ | 34100 - 67600 | | |
| ಒಟ್ಟು | | 10 | - | - | | |

2. ಹೊಸ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯು ಉತ್ತಮವಾಗಿ ಕಾರ್ಯ ನಿರ್ವಹಿಸಲು ಮೇಲ್ಕಂಡಂತೆ 10 (ಹತ್ತು) ಹುದ್ದೆಗಳ ಅವಶ್ಯಕತೆ ಇರುತ್ತದೆ ಎಂದು ನಿರ್ಧರಿಸಲಾಯಿತು. ಇವುಗಳಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಅಧಿಕಾರಿ/ಸಿಬ್ಬಂದಿಗಳನ್ನು ಯಾವ ಯಾವ ಕಛೇರಿಗಳಿಂದ ಹುದ್ದೆ ಸ್ಥಳಾಂತರ ಮಾಡಬೇಕಾಗಿದೆ ? ಎನ್ನುವ ಕುರಿತಾಗಿ ಚರ್ಚಿಸಲಾಯಿತು.

3. ಇದಕ್ಕೆ ಪೂರಕವಾಗಿ ಕಲಬುರಗಿ ಜಿಲ್ಲೆಯ ಸಿಟಿಇ ಕಛೇರಿ, ಡಿಡಿಪಿಐ ಕಛೇರಿ, ಡಯಟ್ ಕಛೇರಿ ಹಾಗೂ ಕಮಲಾಪೂರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಸಂಬಂಧಿಸಿದಂತೆ ಕಲಬುರಗಿ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಹುದ್ದೆಗಳ ಮಾಹಿತಿಯನ್ನು ಆಯಾ ಕಛೇರಿಯ ಮುಖ್ಯಸ್ಥರು ಪ್ರಸ್ತುತಪಡಿಸಿದರು.

4. ಮೇಲ್ಕಂಡ ಪ್ರತಿ ಕಛೇರಿಗಳಲ್ಲಿನ ಮಂಜೂರಾದ ಹುದ್ದೆಗಳು, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ಖಾಲಿ ಹುದ್ದೆಗಳ ಮಾಹಿತಿಯನ್ನು ನಿಖರವಾಗಿ ಪಡೆಯಲಾಯಿತು ಹಾಗೂ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಮಲಾಪೂರ ಈ ಕಛೇರಿಗೆ ಬೇಕಾಗುವ ಅಧಿಕಾರಿ / ಸಿಬ್ಬಂದಿ ವೃಂದದವರನ್ನು ಯಾವ ಕಛೇರಿಯಿಂದ ಸ್ಥಳಾಂತರಿಸಬಹುದಾಗಿದೆ ? ಎಂಬುದನ್ನು ಒಂದೊಂದಾಗಿ ಚರ್ಚಿಸಲಾಯಿತು.

   i. **ಕ್ಷೇತ್ರ ಶಿಕ್ಷಣಾಧಿಕಾರಿಗಳು:** ಸದರಿ ಹುದ್ದೆಯು ಓರ್ವ ಗ್ರೂಪ್-ಎ ಕಿರಿಯ ಶ್ರೇಣಿಯ ಹುದ್ದೆಯಾಗಿರುವುದರಿಂದ ಡಯಟ್ ಕಲಬುರಗಿಯಲ್ಲಿ ಪ್ರಸ್ತುತ ಮಂಜೂರಾಗಿರುವ ಒಟ್ಟಾರೆ 07 ಹಿರಿಯ ಉಪನ್ಯಾಸಕರ ಹುದ್ದೆಗಳಲ್ಲಿ ಒಂದು ಹುದ್ದೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಕಮಲಾಪೂರ ಈ ಹುದ್ದೆಗೆ ಸ್ಥಳಾಂತರಿಸಲು ನಿರ್ಧರಿಸಲಾಯಿತು.
   ii. **ಕ್ಷೇತ್ರ ಸಮನ್ವಯಾಧಿಕಾರಿಗಳು**: ಸದರಿ ಹುದ್ದೆಯು ವೃಂದ-ಬಿ ಹುದ್ದೆಯಾಗಿರುವದರಿಂದ ಡಯಟ್ ಕಲಬುರಗಿಯಲ್ಲಿ ಒಟ್ಟಾರೆ ಮಂಜೂರಾಗಿರುವ 17 ಉಪನ್ಯಾಸಕರ ಹುದ್ದೆಗಳಿಂದ ಒಂದು ಹುದ್ದೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಮಲಾಪೂರಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಯಿತು.
   iii. **ಸಹಾಯಕ ನಿರ್ದೇಶಕರು (ಎಮ್.ಡಿ.ಎಮ್):** ಸದರಿ ಹುದ್ದೆಯು ಗ್ರೂಪ್-ಬಿ ಹುದ್ದೆಯಾಗಿರುವುದರಿಂದ ಡಯಟ್ ಕಲಬುರಗಿಯಲ್ಲಿ ಒಟ್ಟಾರೆ ಮಂಜೂರಾಗಿರುವ 17 ಉಪನ್ಯಾಸಕರ ಹುದ್ದೆಗಳಿಂದ ಮತ್ತೊಂದು ಹುದ್ದೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಮಲಾಪೂರಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಯಿತು.
   iv. **ಅಧೀಕ್ಷಕರು:** ಡಯಟ್ ಕಲಬುರಗಿಯಲ್ಲಿ ಮಂಜೂರಾಗಿರುವ 03 ಅಧೀಕ್ಷಕರ ಹುದ್ದೆಗಳಿಂದ ಒಂದು ಹುದ್ದೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಮಲಾಪೂರಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಯಿತು.
   v. **ಪ್ರಥಮ ದರ್ಜೆ ಸಹಾಯಕರು:** ಸದರಿ ನೂತನ ಕೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ 02 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ಅವಶ್ಯಕತೆ ಇರುತ್ತದೆ. ಇದಕ್ಕೆ ಒಂದು ಹುದ್ದೆಯನ್ನು ಪ್ರಸ್ತುತ ಬಿಇಓ ಕಲಬುರಗಿ ಉತ್ತರ ವಲಯ ಕಛೇರಿಯಿಂದ ಸ್ಥಳಾಂತರಗೊಳಿಸಲು ನಿರ್ಧರಿಸಲಾಯಿತು. ಮತ್ತೊಂದು ಹುದ್ದೆಯನ್ನು ಡಯಟ್ ಕಲಬುರಗಿಯಲ್ಲಿ ಮಂಜೂರಾಗಿರುವ ಒಟ್ಟು 06 ಪ್ರ.ದ.ಸ. ಹುದ್ದೆಯಿಂದ 01 ಹುದ್ದೆಯನ್ನು ಸ್ಥಳಾಂತರ ಮಾಡಲು ನಿರ್ಧರಿಸಲಾಯಿತು.
   vi. **ದ್ವಿತೀಯ ದರ್ಜೆ ಸಹಾಯಕರು**: ಸದರಿ ನೂತನ ಕೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ 02 ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಅವಶ್ಯಕತೆ ಇರುತ್ತದೆ. ಇದಕ್ಕೆ ಒಂದು ಹುದ್ದೆಯನ್ನು ಪ್ರಸ್ತುತ ಬಿಇಓ ಕಲಬುರಗಿ ಉತ್ತರ ವಲಯ ಕಛೇರಿಯಿಂದ ಸ್ಥಳಾಂತರಗೊಳಿಸಲು ನಿರ್ಧರಿಸಲಾಯಿತು. ಮತ್ತೊಂದು ಹುದ್ದೆಯನ್ನು ಡಯಟ್ ಕಲಬುರಗಿಯಲ್ಲಿ ಮಂಜೂರಾಗಿರುವ ಒಟ್ಟು ದ್ವಿ.ದ.ಸ. ಹುದ್ದೆಯಿಂದ 01 ಹುದ್ದೆಯನ್ನು ಸ್ಥಳಾಂತರ ಮಾಡಲು ನಿರ್ಧರಿಸಲಾಯಿತು.
   vii. **ಸೇವಕರು:** ಸದರಿ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಮಲಾಪೂರಕ್ಕೆ ಅವಶ್ಯಕ 02 ಸೇವಕ ಹುದ್ದೆಗಳನ್ನು ಒಂದು ಸೇವಕ ಹುದ್ದೆಯನ್ನು ಸಿಟಿಇ ಕಲಬುರಗಿ ಕಛೇರಿಯಿಂದ ಹಾಗೂ ಇನ್ನೊಂದು ಸೇವಕ ಹುದ್ದೆಯನ್ನು ಡಯಟ್ ಕಲಬುರಗಿ ಕಛೇರಿಯಿಂದ ಸ್ಥಳಾಂತರಿಸಲು ನಿರ್ಧರಿಸಲಾಯಿತು.

5. ಮೇಲ್ಕಂಡ ಕಛೇರಿಯನ್ನು ಈಗಾಗಲೇ ಇರುವ ಡಯಟ್ ಕಲಬುರಗಿ ಕಟ್ಟಡದಲ್ಲಿ ಪ್ರಾರಂಭಿಸಲು ನಿರ್ಧರಿಸಲಾಯಿತು. ಈ ಮೊದಲು ಕಮಲಾಪೂರದಲ್ಲಿದ್ದಂತಹ ಡಯಟ್ ಈಗ ಡಯಟ್ ಕಲಬುರಗಿಗೆ ಸ್ಥಳಾಂತರವಾಗಿರುದರಿಂದ ಈ ಮೊದಲಿನ ಡಯಟ್ ಕಮಲಾಪೂರದ ಕಟ್ಟಡ ಹಾಗೂ ಅಲ್ಲಿರುವ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಡಯಟ್ ಕಲಬುರಗಿಯ ಪ್ರಾಚಾರ್ಯರಾಗಿರುವ ಶ್ರೀ ಎನ್. ಲಕ್ಷ್ಮೀಪತಿ ಇವರು ಈ ತಕ್ಷಣವೇ ಕಲಬುರಗಿ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿರುವ ಶ್ರೀ ಸೋಮಶೇಖರ ಹಂಚಿನಾಳ ರವರಿಗೆ ಹಸ್ತಾಂತರಿಸಲು ತಿಳಿಸಲಾಯಿತು.

6. ಸದರಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕಮಲಾಪೂರವನ್ನು ದಿನಾಂಕ: 25.04.2025 ರಿಂದ ಪ್ರಾರಂಭಿಸಲು ಕಲಬುರಗಿ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಸೋಮಶೇಖರ ಹಂಚಿನಾಳರವರಿಗೆ ಸೂಚಿಸಲಾಯಿತು.

7. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಕಮಲಾಪೂರ ಈ ಕಛೇರಿಯನ್ನು ಹೊರತುಪಡಿಸಿ ಕಲಬುರಗಿ ಜಿಲ್ಲೆಯ ಇನ್ನುಳಿದ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಹುದ್ದೆಗಳನ್ನು ಸ್ಥಳಾಂತರಗೊಳಿಸಲು ಕಲಬುರಗಿ ವಿಭಾಗಕ್ಕೆ ಹೊರಡಿಸಿರುವ ಸುತ್ತೋಲೆಯನ್ನು ಪಾಲಿಸುತ್ತಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಕಲಬುರಗಿ ರವರು ತಮ್ಮ ಅಧ್ಯಕ್ಷತೆಯಲ್ಲಿ ಪ್ರಕ್ರಿಯನ್ನು ಕೈಗೊಂಡು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

ಈ ಮೇಲಿನಂತೆ ಎಲ್ಲಾ ಅಂಶಗಳನ್ನು ಚರ್ಚಿಸಲಾಗಿ, ಒಟ್ಟಾರೆಯಾಗಿ ನೂತನವಾಗಿ ಸೃಜನೆಯಾಗುವಂತಹ ಕಮಲಾಪೂರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಈ ಕೆಳಕಂಡ ಕೋಷ್ಟಕದಂತೆ ಹುದ್ದೆಗಳನ್ನು ಸ್ಥಳಾಂತರಗೊಳಿಸಿ ನಿರ್ಧರಿಸಲಾಯಿತು.

ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹುದ್ದೆಗಳ ಮಾಹಿತಿ

| ಕ್ರ.ಸಂ. | ಪದನಾಮ | ಹುದ್ದೆಗಳ ಸಂಖ್ಯೆ | ವೃಂದ | ವೇತನ ಶ್ರೇಣಿ | ಸ್ಥಳಾಂತರಿಸಲಾಗುವ ಹುದ್ದೆ | ಸದರಿ ಹುದ್ದೆ ಮೂಲಸ್ಥಾನ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಕ್ಷೇತ್ರ ಶಿಕ್ಷಣಾಧಿಕಾರಿಗಳು | 1 | ಎ | 83700 - 155200 | ಹಿರಿಯ ಉಪನ್ಯಾಸಕರು | ಡಯಟ್ ಕಲಬುರಗಿ |
| 2 | ಕ್ಷೇತ್ರ ಸಮನ್ವಯ ಅಧಿಕಾರಿಗಳು | 1 | ಬಿ | 69250 – 134200 | ಉಪನ್ಯಾಸಕರು | ಡಯಟ್ ಕಲಬುರಗಿ |
| 3 | ಸಹಾಯಕ ನಿರ್ದೇಶಕರು | 1 | ಬಿ | 54175 – 99400 | ಉಪನ್ಯಾಸಕರು | ಡಯಟ್ ಕಲಬುರಗಿ |
| 4 | ಅಧೀಕ್ಷಕರು | 1 | ಸಿ | 61300 – 112900 | ಅಧೀಕ್ಷಕರು | ಡಯಟ್ ಕಲಬುರಗಿ |
| 5 | ಪ್ರಥಮ ದರ್ಜೆ ಸಹಾಯಕರು | 2 | ಸಿ | 44425 – 83700 | ಪ್ರ.ದ.ಸ.-1 | ಡಯಟ್ ಕಲಬುರಗಿ |
| | | | | | ಪ್ರ.ದ.ಸ.-1 | ಹಳೆಯ ಬಿಇಓ ಕಛೇರಿ |
| 6 | ದ್ವಿತೀಯ ದರ್ಜೆ ಸಹಾಯಕರು/ ಸಿ.ಸಿ.ಟಿ | 2 | ಸಿ | 34100 – 67600 | ದ್ವಿ.ದ.ಸ.-1 | ಡಯಟ್ ಕಲಬುರಗಿ |
| | | | | | ದ್ವಿ.ದ.ಸ.-1 | ಹಳೆಯ ಬಿಇಓ ಕಛೇರಿ |
| 7 | ಸೇವಕ | 2 | ಡಿ | 27000 – 46675 | ಸೇವಕ - 1 | ಸಿಟಿಇ ಕಲಬುರಗಿ |
| | | | | | ಸೇವಕ - 1 | ಡಯಟ್ ಕಲಬುರಗಿ |
| ಒಟ್ಟು | | 10 | - | - | | |

ಈ ಮೇಲಿನಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆ ಪಡೆಯಲು ನಿರ್ಧರಿಸಿ, ವಂಧನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

23.04.25

**(ಡಾ|| ಆಕಾಶ್ ಎಸ್, ಭಾ.ಆ.ಸೇ)**
ಅಪರ ಆಯುಕ್ತರ ಕಛೇರಿ
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಗಳನ್ನು ಅಗತ್ಯ ಕ್ರಮಕ್ಕಾಗಿ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ .
3. ನಿರ್ದೇಶಕರು/ ಸಹ ನಿರ್ದೇಶಕರು (ಆಡಳಿತ)/ ಸಹ ನಿರ್ದೇಶಕರು (ಪರೀಕ್ಷೆ) ಈ ಕಚೇರಿ.
4. ಪ್ರಾಂಶುಪಾಲರು, ಸಿ ಟಿ ಇ , ಕಲಬುರಗಿ
5. ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ.
6. ವಿಭಾಗದ ಎಲ್ಲಾ ಡಯಟ್ ಪ್ರಚಾರ್ಯರು.

24/4/25